**ದಿನಾಂಕ: 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯವಿಚಾರಣೆ: ಅರ್ಜಿದಾರರ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ.

| | |
|---|---|
| ನಿಪಿ-585 | ವೇತನ ಪ್ರಮಾಣ ಪತ್ರದ ದೃಢೀಕೃತ ನಕಲು |

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ವಿ.ವಿ.ಸಿ. ವಕೀಲರಿಂದ**

1. ಮೃತ ಈರಮ್ಮ ನನ್ನ ಸೊಸೆಯಾಗಬೇಕು. ಈರಮ್ಮ ಒಬ್ಬಳೇ ಮಗಳು. 1ನೇ ಎದುರುದಾರ ನನ್ನ ಮಗನಾಗಬೇಕು. 1ನೇ ಎದುರುದಾರ ಸರಕಾರಿ ಶಿಕ್ಷಕನಾಗಿರುತ್ತಾನೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ಸುನಿಲಕುಮಾರ ಮತ್ತು ಮಹೇಶ ಇರುತ್ತಾರೆ. ಮಹೇಶನು KSRTC ಯಲ್ಲಿ ಮೆಕ್ಯಾನಿಕ್ ಕೆಲಸ ಮಾಡುತ್ತಾರೆ. ಅಪಘಾತವಾದ ದಿನ ಕಾರಿನಲ್ಲಿ ನನ್ನ ಮಗ, ಸೊಸೆ , ಮೊಮ್ಮಗಳು, ಸೊಸೆಯ ತಮ್ಮ ಮತ್ತು ಚಾಲಕ ಹೋಗುತ್ತಿದ್ದರು. ಅಪಘಾತದಲ್ಲಿ ನಿಮ್ಮ ಸೊಸೆಗೆ ಮಾತ್ರ ಗಾಯಗಳು ಆಗಿದ್ದವು ಎಂದರೆ ಸರಿ. ಅಪಘಾತದಲ್ಲಿ ಸುನೀಲಕುಮಾರ , ಚಾಲಕ, ಈರಮ್ಮರವರ ತಮ್ಮ ಮತ್ತು ಮೊಮ್ಮಗಳಿಗೆ ಯಾವುದೇ ಗಾಯಗಳು ಆಗಿರಲಿಲ್ಲ.

2. ಅಪಘಾತವು ಯಾವ ರೀತಿ ಆಗಿದೆ ಎಂದರೆ ಚಾಲಕ ಕಟ್ ಹೊಡೆದಿದ್ದರಿಂದ ಆಗಿರುತ್ತದೆ. ಕಾರ್ 2-3 ಬಾರಿ ಪಲ್ಟಿಯಾಗಿರುತ್ತದೆ. ಅಪಘಾತವಾದ ನಂತರ ನನ್ನ ಸೊಸೆಗೆ ಕಲ್ಬುರ್ಗಿಯ ಕಾಮರೆಡ್ಡಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಹೈದ್ರಾಬಾದಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಕಲ್ಬುರ್ಗಿ ಕಾಮರೆಡ್ಡಿ ಆಸ್ಪತ್ರೆ ಮತ್ತು ಹೈದ್ರಾಬಾದಿನ ಆಸ್ಪತ್ರೆಯಲ್ಲಿ ಒಟ್ಟು 58 ದಿನ ಚಿಕಿತ್ಸೆ ಪಡೆದಿರುತ್ತಾರೆ. ಹೈದ್ರಾಬಾದಿನ ಆಸ್ಪತ್ರೆಯಲ್ಲಿನ ಡಿಸ್ಚಾರ್ಜ್ ಸಮರಿ ಹಾಕಿಲ್ಲ ಎಂದರೆ ಗೊತ್ತಿಲ್ಲ. ಹೈದ್ರಾಬಾದಿನ ಆಸ್ಪತ್ರೆಯಲ್ಲಿ ನನ್ನ ಮಗ, ನನ್ನ ಸೊಸೆಯ ತಮ್ಮ ಇದ್ದರು.

3. ನನ್ನ ಮಗ ಸುನೀಲಕುಮಾರನಿಗೆ ಎಷ್ಟು ಸಂಬಳ ಬರುತ್ತದೆ ಎಂದರೆ 45 ಸಾವಿರ ಇಬಹುದು ಎಂದು ಉತ್ತರಿಸುತ್ತಾರೆ. ಮನೆಯನ್ನು ನಿಮ್ಮ ಮಗ ಸುನೀಲಕುಮಾರನೇ ನಡೆಸಿಕೊಂಡು ಹೋಗುತ್ತಿದ್ದ ಎಂದರೆ ಸರಿ. ನಿಮ್ಮ ಮಗ ಮಹೇಶ ಮತ್ತು ನೀವು ಒಂದೇ ಕಡೆ ಇರುತ್ತಿದ್ದೀರಿ ಎಂದರೆ ಬೇರೆ ಬೇರೆ ಕಡೆ ಇರುತ್ತಿದ್ದೆವು ಎಂದು ಉತ್ತರಿಸುತ್ತಾರೆ. ನನ್ನ ಸೊಸೆ ಬಾಗಲಕೋಟೆಯ ನೀಲಾ ನಗರದಲ್ಲಿ ಶಿಕ್ಷಕಿಯಾಗಿದ್ದಳು. ನನ್ನ ಸೊಸೆಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ಗೊತ್ತಿಲ್ಲ. ನಿಮ್ಮ ಸೊಸೆಗೆ ಬರುವಂತಹ ಸಂಬಳ ಅವರ ಅಕೌಂಟಿಗೆ ಬರುತ್ತಿತ್ತು ಎಂದರೆ ಸರಿ. ನಿಮ್ಮ ಸೊಸೆಗೆ ರೂ.45,396/- ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ನಿಮ್ಮ ಸೊಸೆ ತನ್ನ ಸಂಬಳವನ್ನು ತನ್ನ ತವರು ಮನೆಗೆ ಕೊಡುತ್ತಿದ್ದರು ಅವರ ಮಕ್ಕಳ ಮೇಲೆ ಖರ್ಚು ಮಾಡುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ನೀವು ಯಾವುದೇ ಆಧಾರ ಇಲ್ಲದೇ ಸುಳ್ಳು ಪರಿಹಾರ ಕೇಳಿರುತ್ತೀರಿ ಎಂದರೆ ಸರಿಯಲ್ಲ.

ಆಸ್ಪತ್ರೆಯ ವೈದ್ಯಕೀಯ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ